ಜೊಲ್ಲೆ ಗ್ರೂಪ್
ವಾರ್ತಾ ಪತ್ರ
(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)
ಜುಲೈ 2023–ಸಂಪುಟ–7 ಸಂಚಿಕೆ–08

# ದರ್ಪಣ




## ಶಿವಶಂಕರ ಜೊಲ್ಲೆ ಆಂಗ್ಲ ಮಾಧ್ಯಮ ಶಾಲೆಯ ಆವರಣದಲ್ಲಿ
# 9ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಪಟ್ಟಣದ ಶಿವಶಂಕರ ಜೊಲ್ಲೆ ಆಂಗ್ಲ ಮಾಧ್ಯಮ ಶಾಲೆಯ ಆವರಣದಲ್ಲಿ ಬುಧವಾರ ಜೊಲ್ಲೆ ಗ್ರೂಪ್ ವತಿಯಿಂದ ಆಯೋಜಿಸಿದ್ದ 9ನೇ ಅಂತಾರಾಷ್ಟ್ರೀಯ ವಿಶ್ವಯೋಗ ದಿನಾಚರಣೆ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಹಾಗೂ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ, ಸೌ. ಪ್ರಿಯಾ ಜೊಲ್ಲೆ, ಶ್ರೀ. ಬಸವಪ್ರಸಾದ ಜೊಲ್ಲೆ ಸಸಿಗೆ ನೀರು ಹಾಗೂ ಅಗ್ನಿಹೋತ್ರ ಮಾಡುವ ಮೂಲಕ ಚಾಲನೆ ನೀಡಿದರು.

ನಿಪ್ಪಾಣಿ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆಯವರು ಮಾತನಾಡಿ "ಇಂದಿನ ತಂತ್ರಜ್ಞಾನ ಮತ್ತು ಸ್ಪರ್ಧಾತ್ಮಕ ಯುಗದಲ್ಲಿ ನಾವಿದ್ದೇವೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಬಹಳಷ್ಟು ಸ್ಪರ್ಧೆ ಇದೆ. ಅದಕ್ಕೆ ಅನುಗುಣವಾಗಿ ನಮ್ಮ ಮಕ್ಕಳನ್ನು ನಾವು ಸ್ಪರ್ಧಾತ್ಮಕ ಮನೋಭಾವದೊಂದಿಗೆ ಬೆಳೆಸುವ ಕೆಲಸ ಮಾಡಬೇಕಾಗಿದೆ. ಶಾರೀರಿಕ ಮತ್ತು ಮಾನಸಿಕವಾಗಿ ಆರೋಗ್ಯವಂತರಾಗಿದ್ದರೆ ಮಾತ್ರ ನಮ್ಮ ಮಕ್ಕಳು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಬಾಳಿ ಬದುಕಲು ಸಾಧ್ಯ. ನಮ್ಮ ದೇಶದಲ್ಲಿರುವ ಋಷಿ ಮುನಿಗಳು ಯೋಗ ಪರಿಚಯ ಮಾಡಿಕೊಟ್ಟಿದ್ದು ಆಯುರ್ವೇದದಿಂದ ನಮ್ಮ ಆರೋಗ್ಯ ಹೇಗೆ ಇಟ್ಟುಕೊಳ್ಳಬೇಕು ಎಂಬುದನ್ನು ಋಷಿ ಮುನಿಗಳು ಹೇಳಿಕೊಟ್ಟಿದ್ದಾರೆ" ಎಂದು ಹೇಳಿದರು.

ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ–ಸ್ಟೇಟ)
ಕ್ರೀಯಾತ್ಮಕ ಹಾಗೂ ಪ್ರಗತಿಶೀಲ ಅರ್ಥವ್ಯವಸ್ಥೆ




ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆಯವರು ಮಾತನಾಡಿ "ಯೋಗದಿಂದ ಮಾತ್ರ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ ಆದ್ದರಿಂದ ಕೇವಲ ಯೋಗವನ್ನು ಯೋಗ ದಿನಾಚರಣೆಯಂದು ಮಾತ್ರ ಮಾಡಿ ಬಿಡದೆ ಅದನ್ನು ವರ್ಷ ಪೂರ್ತಿ ಪ್ರತಿ ದಿನ ಯೋಗ ಮಾಡಬೇಕು. ಅದರಲ್ಲಿಯೂ ವಿದ್ಯಾರ್ಥಿಗಳು ಯೋಗ ಮಾಡುವುದು ಬಹಳ ಮುಖ್ಯ" ಎಂದು ಹೇಳಿದರು.

ಪತಂಜಲಿ ಯೋಗ ಪೀಠದ ಕರ್ನಾಟಕ ಉಸ್ತುವಾರಿ ಯೋಗಾಚಾರ್ಯ ಭವರಲಾಲ ಆರ್ಯರವರು ಮಾತನಾಡಿ "ಕಳೆದವರ್ಷ ನಡೆದ ಯೋಗ ದಿನಾಚರಣೆಯಲ್ಲಿ ಇಡೀ ಭಾರತದಲ್ಲಿಯೇ ದೊಡ್ಡ ಯೋಗ ಶಿಬಿರ ನಡೆಸಿರುವ ಹೆಗ್ಗಳಿಕೆ ಜೊಲ್ಲೆ ಕುಟುಂಬಕ್ಕೆ ಹೋಗುತ್ತದೆ. ಯೋಗದ 'ಚಿತ್ರಣವನ್ನು ನೋಡಿ ರಾಮದೇವ ಬಾಬಾ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ವರ್ಷವು ಕೂಡಾ 5 ಸಾವಿರ ಕ್ಕಿಂತ ಹೆಚ್ಚು ಜನರನ್ನು ಸೇರಿಸಿ ಯೋಗ ದಿನ ಆಚರಿಸಿರುವುದು ಸಂತಸ ತಂದಿದೆ" ಎಂದರು.

ಶಿಬಿರದಲ್ಲಿ ಸುಮಾರು 5000 ಕ್ಕಿಂತ ಹೆಚ್ಚು ಯೋಗಸಾಧಕರು ಭಾಗವಹಿಸಿದ್ದರು. ಬಿಜೆಪಿ ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ದುಂಡಪ್ಪ ಬೆಂಡವಾಡೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸತೀಶ ಅಪ್ಪಾಜಿಗೋಳ, ಶಿವಮೂರ್ತಿ ಪಡಲಾಳೆ ಹಾಗೂ ಜೊಲ್ಲಿ ಗ್ರೂಪ್ ಅಂಗ ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ಉಪಸ್ಥಿತರಿದ್ದರು.






# ವಿಶ್ವ ಪರಿಸರ ದಿನ–2023

ಪ್ರತಿ ವರ್ಷ ಜೂನ್ 5 ರಂದು ಪ್ರತಿಯೊಬ್ಬರಲ್ಲೂ ಪರಿಸರದ ಬಗ್ಗೆ ಕಾಳಜಿ ಮೂಡಿಸುವ ಸಲುವಾಗಿ ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತದೆ. ಪ್ರತಿ ವರ್ಷ ಬೇರೆ ಬೇರೆ ಥೀಮ್‌ನೊಂದಿಗೆ ಪರಿಸರ ದಿನವನ್ನು ಆಚರಿಸಲಾಗುತ್ತದೆ.

ಪ್ರತಿ ವರ್ಷ ಜೂನ್ 5 ರಂದು ವಿಶ್ವದಾದ್ಯಂತ ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತದೆ. ವಿಶ್ವ ಪರಿಸರ ದಿನವನ್ನು ವಿಶ್ವದಾದ್ಯಂತ ಪರಿಸರದ ಬಗ್ಗೆ ಜಾಗೃತಿ ಮತ್ತು ನಮ್ಮ ಪರಿಸರದ ರಕ್ಷಣೆಗೆ ಉತ್ತೇಜಿಸಲು ಈ ದಿನವನ್ನು ಆಚರಿಸಲಾಗುತ್ತದೆ. ಜೀವಿಗಳ ಪೋಷಣೆಯಲ್ಲಿ ಪರಿಸರ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಪರಿಸರದ ಸಮೃದ್ಧಿ ಆರೋಗ್ಯಕರ ಜೀವನ ಮತ್ತು ಭೂಮಿಯ ಮೇಲಿನ ಪ್ರತಿಯೊಂದು ಜೀವಿಯ ಜೀವನದ ಅಸ್ತಿತ್ವಕ್ಕೆ ಕಾರಣವಾಗಿದೆ.

ಮಾನವ ಸೇರಿದಂತೆ ಇತರೆ ಪ್ರಾಣಿ, ಪಕ್ಷಿಗಳು, ಸೇರಿದಂತೆ ಪ್ರತಿಯೊಂದು ಜೀವ ಸಂಕುಲ ಆಹಾರ, ಗಾಳಿ, ನೀರು ಇತರೆ ಅಗತ್ಯತೆಗಳಿಗಾಗಿ ಪರಿಸರವನ್ನ ಅವಲಂಭಿಸಿದೆ ಎಂದರೆ ತಪ್ಪಾಗಲಾರದು. ಆದರೆ ಇತ್ತೀಚಿನ ದಿನಗಳಲ್ಲಿ ಮಾನವನು ಆಧುನಿಕ ಬದುಕಿನ ಗೀಳಿಗೆ ಬಿದ್ದು ಪರಿಸರವನ್ನು ನಾಶ ಮಾಡುತ್ತಿದ್ದಾನೆ. ಈಗ ಮಾನವನ ಈ ದುರಾಸೆಯಿಂದ ಗಾಳಿ, ನೀರು, ಮಣ್ಣು ಮುಂತಾದ ಪರಿಸರದ ಪ್ರತಿಯೊಂದು ಅಂಶವೂ ಕಲುಷಿತಗೊಂಡಿದೆ. ಮನುಷ್ಯ ತನ್ನ ಅಭಿವೃದ್ಧಿಗಾಗಿ ತನಗೆ ಅರಿವಿಲ್ಲದಂತೆ ಪರಿಸರವನ್ನು ಹಾಳು ಮಾಡುತ್ತಿದ್ದಾನೆ.

ಹೀಗಾಗಿ ಪ್ರತಿಯೊಬ್ಬರಲ್ಲೂ ಪರಿಸರದ ಬಗ್ಗೆ ಕಾಳಜಿ ಮೂಡಿಸುವ ಸಲುವಾಗಿ ಪ್ರತಿವರ್ಷ ಜೂನ್ 5 ರಂದು ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತದೆ. ಪ್ರತಿ ವರ್ಷ ಬೇರೆ ಬೇರೆ ಧ್ಯೇಯವಾಕ್ಯದೊಂದಿಗೆ ಪರಿಸರ ದಿನವನ್ನು ಆಚರಿಸಲಾಗುತ್ತದೆ. ಇದರ ಮುಖ್ಯ ಉದ್ದೇಶ ಪರಿಸರದ ಬಗ್ಗೆ ಪ್ರತಿ ಮನುಷ್ಯನಲ್ಲೂ ಜಾಗೃತಿ ಮೂಡಿಸುವುದು ಮತ್ತು ಪರಿಸರವನ್ನು ಹಾಳು ಮಾಡುವುದನ್ನ ತಡೆಯುವುದಾಗಿದೆ. ವಿಶ್ವ ಪರಿಸರ ದಿನವು ಸಾರ್ವಜನಿಕವಾಗಿ ತಲುಪಲು ಜಾಗತಿಕ ವೇದಿಕೆಯಾಗಿ ಬೆಳೆದಿದೆ. ಪ್ರತಿವರ್ಷ 143ಕ್ಕೂ ಹೆಚ್ಚು ದೇಶಗಳು ಈ ದಿನದಲ್ಲಿ ಭಾಗಿಯಾಗುತ್ತವೆ. ಪ್ರತಿ ವರ್ಷ ವಿಶ್ವ ಪರಿಸರ ದಿನವನ್ನು ವಿವಿಧ ಧ್ಯೇಯ ವಾಕ್ಯದೊಂದಿಗೆ ಆಚರಿಸಲಾಗುತ್ತದೆ. ಪ್ರಮುಖ ಸಂಸ್ಥೆಗಳು, ಎನ್‌ಜಿಒಗಳು, ಸಮುದಾಯಗಳು, ಸರ್ಕಾರಗಳು ವಿಶ್ವದಾದ್ಯಂತ ಪರಿಸರ ದಿನವನ್ನು ವಿವಿಧ ರೀತಿಯಲ್ಲಿ ಆಚರಿಸುತ್ತವೆ. ವಿಶ್ವ ಪರಿಸರ ದಿನ ಆಚರಣೆಯ ಏಕೆ? ಮಹತ್ವವೇನು? ಎನ್ನುವ ಸಂಪೂರ್ಣ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

### ವಿಶ್ವ ಪರಿಸರ ದಿನದ ಇತಿಹಾಸ

ವಿಶ್ವ ಪರಿಸರ ದಿನವನ್ನು 1974 ರಲ್ಲಿ ವಿಶ್ವಸಂಸ್ಥೆಯ ಅನುಮೋದನೆಯೊಂದಿಗೆ ಆರಂಭಿಸಲಾಯಿತು. ಈ ಕುರಿತು 1972 ರಲ್ಲಿಯೇ ಚರ್ಚೆಗಳು ಆರಂಭವಾಗಿತ್ತು. ಆದರೆ ಎರಡು ವರ್ಷಗಳ ಕಾಲ ಈ ಚರ್ಚೆ ನಡೆಸಿ, 1974 ಜೂನ್ 5 ರಂದು ಮೊದಲು ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು. ಅಂದಿನಿಂದ ಪ್ರತಿ ವರ್ಷ ವಿಶ್ವ ಪರಿಸರ ದಿನವನ್ನು ಒಂದು ಧ್ಯೇಯವಾಕ್ಯದೊಂದಿಗೆ ಆಚರಿಸಲಾಗುತ್ತದೆ.

### ವಿಶ್ವ ಪರಿಸರ ದಿನವನ್ನು ಯಾವಾಗ ಆಚರಿಸಲಾಗುತ್ತದೆ?

ವಿಶ್ವ ಪರಿಸರ ದಿನವನ್ನು ಪ್ರತಿ ವರ್ಷ ಜೂನ್ 5 ರಂದು ಆಚರಿಸಲಾಗುತ್ತದೆ. ಜೂನ್ ತಿಂಗಳ 5ನೇ ತಾರೀಖಿನಿಂದ ಜೂನ್ 16ರ ವರೆಗೆ ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತದೆ. ಈ ದಿನಗಳಲ್ಲಿ ಎಲ್ಲಡೆ ಮರಗಳನ್ನು ನೆಡಲಾಗುತ್ತದೆ. ಮತ್ತು ಪರಿಸರಕ್ಕೆ ಸಂಬಂಧಿಸಿದ ಅನೇಕ ಜಾಗೃತಿ ಕೆಲಸಗಳನ್ನು ಮಾಡಲಾಗುತ್ತದೆ.

### ವಿಶ್ವ ಪರಿಸರ ದಿನ ಆಚರಣೆ ಏಕೆ ?

ಪ್ರತಿಯೊಬ್ಬರಲ್ಲು ಪರಿಸರದ ಬಗ್ಗೆ ಕಾಳಜಿ ಮೂಡಿಸುವ ಸಲುವಾಗಿ ಪ್ರತಿವರ್ಷ ಜೂನ್ 5ರಂದು ವಿಶ್ವಪರಿಸರ ದಿನವನ್ನು ಆಚರಿಸಲಾಗುತ್ತದೆ. ಪ್ರತಿ ವರ್ಷ ಬೇರೆ ಬೇರೆ ಧ್ಯೇಯವಾಕ್ಯದೊಂದಿಗೆ ಪರಿಸರ ದಿನವನ್ನು ಆಚರಿಸಲಾಗುತ್ತದೆ. ಇದರ ಮುಖ್ಯ ಉದ್ದೇಶ ಪರಿಸರದ ಬಗ್ಗೆ ಪ್ರತಿ ಮನುಷ್ಯನಲ್ಲೂ ಜಾಗೃತಿ ಮೂಡಿಸುವುದು ಮತ್ತು ಪರಿಸರವನ್ನು ಹಾಳು ಮಾಡುವುದನ್ನ ತಡೆಯುವುದಾಗಿದೆ.

### ಪರಿಸರ ದಿನದ ಉದ್ದೇಶಗಳು

* ಪರಿಸರಕ್ಕೆ ಸಂಬಂಧಿಸಿದಂತೆ ಜನರಲ್ಲಿ ಜಾಗೃತಿ ಮೂಡಿಸುವುದು.
* ಪರಿಸರಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು.
* ಪರಿಸರ ಸ್ನೇಹಿ ಅಭಿವೃದ್ಧಿ ಪಡಿಸಲು ಅಭಿಯಾನ ಆರಂಭಿಸುವುದು.
* ಗಿಡ, ಮರಗಳನ್ನು ಬೆಳೆಸುವಂತೆ ಜನರನ್ನು ಪ್ರೇರೆಪಿಸುವುದು.
* ಪರಿಸರವನ್ನು ನಾಶ ಮಾಡದಂತ ಜಾಗೃತಿ ಮೂಡಿಸುವುದು.
* ಪರಿಸರ ಪ್ರತಿಯೊಂದು ಜೀವಿಗೆ ಎಷ್ಟು ಮುಖ್ಯ ಎನ್ನುವುದರ ಬಗ್ಗೆ ಅರಿವು ಮೂಡಿಸುವುದು.

### ವಿಶ್ವ ಪರಿಸರ ದಿನದ 2023ರ ಥೀಮ್ –2023

ಪ್ರತಿ ವರ್ಷ ಬೇರೆ ಬೇರೆ ಧ್ಯೇಯವಾಕ್ಯದೊಂದಿಗೆ ಪರಿಸರ ದಿನವನ್ನು ಆಚರಿಸಲಾಗುತ್ತದೆ. ಈ ಧ್ಯೇಯವಾಕ್ಯದ ಉದ್ದೇಶ ಪರಿಸರದ ಬಗ್ಗೆ ಪ್ರತಿ ಎಲ್ಲರಲ್ಲೂ ಜಾಗೃತಿ ಮೂಡಿಸುವುದು ಮತ್ತು ಪರಿಸರವನ್ನು ಹಾಳು ಮಾಡುವುದನ್ನ ತಡೆಯುವುದಾಗಿದೆ. 2023ರ ಥೀಮ್ 'ಪ್ಲಾಸ್ಟಿಕ್ ಮಾಲಿನ್ಯ ತಡೆಗಟ್ಟುವುದು' ಆಗಿದೆ.

## ಇನ್ನೇನು ಮುಗಿಯಲಿದೆ ಪದವಿ

ಇನ್ನೇನು ಮುಗಿಯಲಿದೆ ಪದವಿ
ಅದೆಷ್ಟು ವಿಚಿತ್ರ ಅಲ್ಲವೇ

ಆಗ ಮನಸಿಲ್ಲದೆ
ಮುಗುಳುನಗೆ ಕೊಡುತಿದ್ದೆವು
ಈಗ ಮನಬಿಚ್ಚಿ
ಹೊಟ್ಟೆ ನೋಯುವಷ್ಟು ನಗುವೆವು

ಆಗ ನಂಬಿಕೆ ಇಲ್ಲದ
ವಾತಾವರಣದಲ್ಲಿ ಬಂದವು
ಈಗ ಮನೆಯವರಂತೆ
ನಂಬಿಕೆ ಬೆಳೆಸಿಕೊಂಡೆವು.

ಆಗ ಇಲ್ಲದ ಪ್ರೀತಿಯ
ಇದ್ದಂತೆ ತೋರುತ್ತಿದ್ದೆವು.
ಈಗ ಇದ್ದ ಪ್ರೀತಿಯ
ಬೈಗುಳದೀ ಹೊರಹಾಕುತ್ತಿರುವೆವು.

ಆಗ ಸಹಜವಾಗಿ
ಸಹಪಾಠಿಗಳು ಅನ್ನುತ್ತಿದ್ದೆವು
ಈಗ ಪ್ರೀತಿ ಸಲುಗೆಯ
ಸ್ನೇಹಿತರು ಆಗಿರುವೆವು

ಆದರೇನು ಮಾಡುವುದು
ಮುಗಿಯಲಿದೆ ಪದವಿ ಜೀವನ.

– ಸಿರಿ ಕನ್ನಡತಿ
ಕು. ಶ್ರೇಯಾ ರಮಾಜಿ
ಬಿ.ಎಸ್.ಡಬ್ಲ್ಯೂ. ಅಂತಿಮವರ್ಷದ ವಿದ್ಯಾರ್ಥಿನಿ
ಮೌಲಾನಾ ಅಬುಲಕಲಾಂ ಆಝಾದ ಬಿಎಸ್‌ಡಬ್ಲ್ಯೂ/
ಎಮ್‌ಎಸ್‌ಡಬ್ಲ್ಯೂ ಮಹಾವಿದ್ಯಾಲಯ, ನಣದಿ

# ವಿಶ್ವ ಬೈಸಿಕಲ್ ದಿನ 2023

ವಿಶ್ವ ಬೈಸಿಕಲ್ ದಿನವನ್ನು ಪ್ರತಿ ವರ್ಷ ಜೂನ್ 3 ರಂದು ಆಚರಿಸಲಾಗುತ್ತದೆ. ಇದು ಯೋಗಕ್ಷೇಮ, ದೇಹದ ಫಿಟ್ನೆಸ್ ಮತ್ತು ಆರೋಗ್ಯಕರ ದೇಹಕ್ಕೆ ತುಂಬಾ ಪ್ರಯೋಜನಕಾರಿಯಾಗಿದೆ. ಬೈಸಿಕಲ್ ಸವಾರಿಯು ಅತ್ಯಂತ ಆನಂದದಾಯಕ ಚಟುವಟಿಕೆಗಳಲ್ಲಿ ಒಂದಾಗಿದೆ, ಇದು ನಮ್ಮ ದೇಹವನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢವಾಗಿಡಲು ಮತ್ತು ರೋಗ ಮುಕ್ತವಾಗಿರಲು ಸಹಾಯ ಮಾಡುತ್ತದೆ.

ಚಿಕ್ಕ ಮಗುವಿಗೆ ಬೈಸಿಕಲ್ ಮೊದಲ ಕನಸಿನ ಉಡುಗೊರೆಯಾಗಿದೆ. ಸವಾರಿ ಮಾಡಲು ಗೊತ್ತಿಲ್ಲದಿದ್ದರೂ, ಇದು ಅವರಿಗೆ ತುಂಬಾ ರೋಮಾಂಚನಕಾರಿಯಾಗಿದೆ. ಬೈಸಿಕಲ್ ಸವಾರಿ ಮಾಡುವುದು ನಮ್ಮ ಜೀವನದಲ್ಲಿ ಮೊದಲ ವಾಹನವನ್ನು ಕಲಿಯುವುದರಿಂದ ನಾವೆಲ್ಲರೂ ಪ್ರಾರಂಭಿಸುತ್ತೇವೆ. ಬೈಕುಗಳು ಮತ್ತು ಸ್ಕೂಟರ್‌ಗಳಂತಹ ಇತರ ವಾಹನಗಳನ್ನು ಕಲಿಯಲು ಇದು ಮೊದಲ ಹೆಜ್ಜೆಯಾಗಿದೆ. ಇದು ಸಾಹಸಮಯವಾಗಿದೆ. ನಾವು ಬೀಳುತ್ತೇವೆ, ನಾವು ಗಾಯಗೊಳ್ಳುತ್ತೇವೆ, ನಾವು ಬೆಂಬಲವನ್ನು ತೆಗೆದುಕೊಳ್ಳುತ್ತೇವೆ ಆದರೆ ನಾವು ಅಭ್ಯಾಸ ಮಾಡುತ್ತಲೇ ಇದ್ದಂತೆ, ನಾವು ಅದನ್ನು ಸವಾರಿ ಮಾಡಲು ಕಲಿಯುತ್ತೇವೆ.

### ವಿಶ್ವ ಬೈಸಿಕಲ್ ದಿನದ ಇತಿಹಾಸ

ವಿಶ್ವ ಬೈಸಿಕಲ್ ದಿನವನ್ನು ಜೂನ್ 3, 2018 ರಂದು ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿ ಸ್ಥಾಪಿಸಿತು. ಇದಕ್ಕಾಗಿ ನಿರ್ಣಯವನ್ನು ಏಪ್ರಿಲ್ 12, 2018 ರಂದು ಅಂಗೀಕರಿಸಲಾಯಿತು. ಈ ದಿನವನ್ನು UN ಜನರಲ್ ಅಸೆಂಬ್ಲಿಯ ಎಲ್ಲಾ 193 ಸದಸ್ಯ ರಾಷ್ಟ್ರಗಳು ವಿಶ್ವ ಬೈಸಿಕಲ್ ದಿನವೆಂದು ಅಂಗೀಕರಿಸಿದವು. ಇದು ತುರ್ಕಮೆನಿಸ್ತಾನ್‌ನಿಂದ ಹೆಚ್ಚು ಬೆಂಬಲಿತವಾಗಿದೆ ಮತ್ತು ಸುಮಾರು 56 ದೇಶಗಳಿಂದ ಸಹ–ಪ್ರಾಯೋಜಿಸಿದೆ.

ವಿಶ್ವ ಬೈಸಿಕಲ್ ದಿನದಂದು ಯುಎನ್ ರೆಸಲ್ಯೂಶನ್ ಅನ್ನು ಉತ್ತೇಜಿಸಲು ಯುಎಸ್ ಮೂಲದ ಪ್ರೊಫೆಸರ್ ಲೆಸ್ಜೆಕ್ ಸಿಬಿಲ್ಸ್ಕಿ ತನ್ನ ಸಮಾಜಶಾಸ್ತ್ರ ತರಗತಿಯೊಂದಿಗೆ ತಳಮಟ್ಟದ ಅಭಿಯಾನವನ್ನು ಪ್ರಾರಂಭಿಸಿದಾಗ ಇದು ಪ್ರಾರಂಭವಾಯಿತು. 2015 ರಲ್ಲಿ, ಅವರು ಬೈಸಿಕಲ್‌ಗಳು ಮತ್ತು ಅಭಿವೃದ್ಧಿಯಲ್ಲಿ ಅವುಗಳ ಪಾತ್ರಗಳನ್ನು ಅನ್ವೇಷಿಸುವ ಶೈಕ್ಷಣಿಕ ಯೋಜನೆಯನ್ನು ಪ್ರಾರಂಭಿಸಿದರು. ಇದನ್ನು 'ಎಲ್ಲರಿಗೂ ಸಸ್ಟೈನಬಿಲಿಟಿ ಮೊಬಿಲಿಟಿ' ಬೆಂಬಲಿಸಿದೆ, ಇದು ಜೂನ್ 3, 2018 ರಂದು ಇದನ್ನು ಸ್ಥಾಪಿಸಿದ ಯುಎನ್ ಜನರಲ್ ಅಸೆಂಬ್ಲಿಯಿಂದ ಪ್ರಸ್ತಾಪಿಸಲಾದ 'ವಿಶ್ವ ಬೈಸಿಕಲ್ ದಿನ' ಎಂಬ ಶ್ರೇಷ್ಠ ಅಂತರರಾಷ್ಟ್ರೀಯ ದಿನವನ್ನಾಗಿ ಪರಿವರ್ತಿಸಿತು.

### ವಿಶ್ವ ಬೈಸಿಕಲ್ ದಿನದ ಮಹತ್ವ

ಸೈಕ್ಲಿಂಗ್ ತುಂಬಾ ಪ್ರಯೋಜನಗಳನ್ನು ಹೊಂದಿದೆ. ಸೈಕ್ಲಿಂಗ್, ವಾಕಿಂಗ್ ಮತ್ತು ಓಟದಂತಹ ನಿಯಮಿತ ದೈಹಿಕ ಚಟುವಟಿಕೆಗಳು ನಮ್ಮ ಅನೇಕ ಆರೋಗ್ಯ ಸಮಸ್ಯೆಗಳನ್ನು ಗುಣಪಡಿಸಬಹುದು. ಅವುಗಳಲ್ಲಿ ಒಂದಾದ ಸೈಕ್ಲಿಂಗ್, ಕೈಗೆಟುಕುವ, ವಿಶ್ವಾಸಾರ್ಹ, ಸವಾರಿ ಮಾಡಲು ಸುಲಭ, ಸ್ವಚ್ಛ ಮತ್ತು ಪರಿಸರ ಸ್ನೇಹಿ ಮತ್ತು ಸುಸ್ಥಿರ ಸಾರಿಗೆ ಸಾಧನವಾಗಿದೆ. ಸೈಕ್ಲಿಂಗ್ ಹೃದ್ರೋಗ, ಪಾರ್ಶ್ವವಾಯು, ಕೆಲವು ಕ್ಯಾನ್ಸರ್, ಮಧುಮೇಹ ಇತ್ಯಾದಿಗಳ ಸಾಧ್ಯತೆಗಳನ್ನು ಕಡಿಮೆ ಮಾಡುತ್ತದೆ. ಇದು ನಗರ–ಗ್ರಾಮೀಣ ವ್ಯತ್ಯಾಸಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ, ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತದೆ ಮತ್ತು 'ಸುಸ್ಥಿರ ಅಭಿವೃದ್ಧಿ ಗುರಿಗಳನ್ನು' ಸಾಧಿಸಲು ಹವಾಮಾನ ಬದಲಾವಣೆಗಳ ವಿರುದ್ಧ ಹೋರಾಡಲು ನಮಗೆ ಸಹಾಯ ಮಾಡುತ್ತದೆ.

### ವಿಶ್ವ ಬೈಸಿಕಲ್ ದಿನದ ಆಚರಣೆ

ಪ್ರಪಂಚದಾದ್ಯಂತದ ಜನರು ಈ ದಿನವನ್ನು ತಮ್ಮದೇ ಆದ ರೀತಿಯಲ್ಲಿ ಆಚರಿಸುತ್ತಾರೆ. ಅವರು ಬೈಸಿಕಲ್ ಸವಾರಿ ಸ್ಪರ್ಧೆಗಳನ್ನು ಆಯೋಜಿಸುತ್ತಾರೆ, ಬೈಸಿಕಲ್ ಹೊಂದಿರುವ ಜನರೊಂದಿಗೆ ಸ್ನೇಹಪರ ಪ್ರವಾಸಗಳನ್ನು ಕೈಗೊಳ್ಳುತ್ತಾರೆ ಮತ್ತು ಇನ್ನೂ ಹೆಚ್ಚಿನದನ್ನು ಮಾಡುತ್ತಾರೆ. ಅನೇಕ ಜನರು ಸೈಕಲ್ ಯೋಜನೆಗೆ ದೇಣಿಗೆ ನೀಡುತ್ತಾರೆ, ಅದು ಅನೇಕರನ್ನು ಬಳಸಲು ಸಹಾಯ ಮಾಡುತ್ತದೆ.

ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ




## ದೇವನ ಆಸ್ತಿ

ದೇವನ ಮನೆಯಿದು ಈ ಜನವೆಲ್ಲ
ಬಾಡಿಗೆದಾರರು ಜೀವಿಗಳೆಲ್ಲ !

ಇಷ್ಟೇ ದಿವಸ, ಇಷ್ಟೇ ವರುಷ
ಇರಬೇಕೆನ್ನುವ ಕಟ್ಟುಕರಾರು
ಏನಿಹುದೇನೋ ಅರಿತವರಾರು?
'ಈಗಲೆ ಬಿಡು' ಎನೆ ಬಿಡಬೇಕಷ್ಟೆ
ನಾವಾಗಿಯೆ ಸಹ ಬಿಡಬಹುದಷ್ಟೆ

ನಾನೆ ಕಟ್ಟಿಸಿದೆ, ನಾನೆ ಹುಟ್ಟಿಸಿದೆ
ಎನ್ನುವುದೆಲ್ಲವು ಜಂಭದ ಸೊಲ್ಲು
ಅಂತ್ಯಕ್ಕೆತೋರುವುದೀನ ನುಡಿ ಜೊಳ್ಳು!
ನಮ್ಮಯ ದಿನಗಳು ಮುಗಿದೈತರಲು
ಬಿಡು ಎಂದೀಶನು ಆಜ್ಞಾಪಿಸಲು

'ಇನ್ನೂ ಇರುವೆನು, ನಾ ಬಿಡಲಾರೆನು'
ಎಂದರೆ ನಡೆಯದು ಈ ಪ್ರತಿಕಾರ
ಬಿಡಿಸುವುದಿರಿಸುವುದವನಧಿಕಾರ!
ಇಷ್ಟನು ಕೊಟ್ಟಿಹುದಾತನ ಕರುಣೆ
ಒಂದಿಷ್ಟಾದರು ಉಪಕೃತಿ ಸ್ಮರಣೆ

ಹಿಡಿದರೆ ಒಳಿತು, ಬಾಡಿಗೆ ಸಲ್ಲಿತು
ಈ ನಮ್ಮಿರುವಿದು ದೇವನ ಆಸ್ತಿ!
ಈ ಜಗವೆಲ್ಲಾ ದೇವನ ವಸತಿ !

– ಬ. ಗಿ. ಯಲ್ಲಟ್ಟಿ



**ಚಾಲನೆ ನಿಡುತ್ತಿರುವು**

ಜೊಲ್ಲೆ ಗ್ರೂಪ್‌ನ ವಿವಿಧ ಅಂಗ ಸಂಸ್ಥೆಗಳ ವಾರ್ಷಿಕ ಸರ್ವ ಸಾಧಾರಣ ಸಭೆಯನ್ನು ಜೊಲ್ಲೆ ಪರಿವಾರ ಸಸಿಗೆ ನೀರೆರೆಯುವ ಮೂಲಕ ಚಾಲನೆ ನಿಡುತ್ತಿರುವ ದೃಶ್ಯ.



**ಚಾಲನೆ ನೀಡುತ್ತಿರುವುದು**

ಆಡಿ ಗ್ರಾಮದಲ್ಲಿ ಅರಣ್ಯ ಇಲಾಖೆಯ 25 ಎಕರೆ ಜಾಗದಲ್ಲಿ ವಿವಿಧ ಬಗೆಯ ಮರಗಳನ್ನು ನೆಡುವ ಕಾರ್ಯಕ್ರಮಕ್ಕೆ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಚಾಲನೆ ನೀಡುತ್ತಿರುವುದು.



**ಭೇಟಿ**

ಕೊಲ್ಲಾಪುರ ನಗರದ ಮಹಾರಾಷ್ಟ್ರದ ರಾಜ್ಯಸಭಾ ಸದಸ್ಯರಾದ ಶ್ರೀ ಧನಂಜಯ ಮಹಾಡಿಕ ಅವರ ನಿವಾಸಕ್ಕೆ ಜೊಲ್ಲೆ ದಂಪತಿ ಸೌಹಾರ್ದಯುತವಾಗಿ ಭೇಟಿ ನೀಡಿ ಸತ್ಕರಿಸುತ್ತಿರುವ ದೃಶ್ಯ.



**ಕಿಟ್ ವಿತರಣೆ**

ನಿಪ್ಪಾಣಿ ನಗರದಲ್ಲಿ ಕಾರ್ಮಿಕ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಲೋಕ ಕಲ್ಯಾಣ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫಲಾನುಭವಿಗಳಿಗೆ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಕಿಟ್ ವಿತರಿಸುತ್ತಿರುವುದು.



**ಚಾಲನೆ ನೀಡುತ್ತಿರುವುದು**

ನಿಪ್ಪಾಣಿ ನಗರದ ಜವಾಹರ ಕೆರೆಯ ಹೂಳೆತ್ತುವ ಕಾರ್ಯಕ್ಕೆ ನಿಪ್ಪಾಣಿ ಮತಕ್ಷೇತ್ರದ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಹಾಗೂ ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಚಾಲನೆ ನೀಡುತ್ತಿರುವ ದೃಶ್ಯ.




**ಗುರುಪೂರ್ಣಿಮಾ**

ಅಥಣಿ ಪಟ್ಟಣದಲ್ಲಿ ರಾಷ್ಟ್ರ ಸೇವಿಕಾ ಸಮಿತಿ ಗಜಾನನ ಶಾಖೆ ವತಿಯಿಂದ ಆಯೋಜಿಸಿದ ಗುರುಪೂರ್ಣಿಮಾ ಕಾರ್ಯಕ್ರಮದಲ್ಲಿ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಭಾಗವಹಿಸಿದ ದೃಶ್ಯ



**ಭೇಟಿ**

ನವದೆಹಲಿಯಲ್ಲಿ ಕೇಂದ್ರ ಕ್ರೀಡಾ ಮತ್ತು ಯುವ ವ್ಯವಹಾರಗಳ ಖಾತೆ ಸಚಿವರಾದ ಶ್ರೀ ಅನುರಾಗ ಠಾಕೂರ ಅವರನ್ನು ಜೊಲ್ಲೆ ದಂಪತಿ ಸೌಹಾರ್ದಯುತವಾಗಿ ಭೇಟಿ ಮಾಡಿದ ದೃಶ್ಯ.



**ಸತ್ಕಾರ ಸ್ವೀಕರಿಸುತ್ತಿರುವುದು**

ಹುಕ್ಕೇರಿ ತಾಲೂಕಿನ ಯರಗಟ್ಟಿ ಗ್ರಾಮದಲ್ಲಿ ಶ್ರೀ ಸದ್ಗುರು ಯಲ್ಲಾಲಿಂಗ ಪ್ರಭು ಮಹಾರಾಜರ ಮಠದಲ್ಲಿ ಪ.ಪೂ.ಡಾ. ಮರಘರಾಜೇಂದ್ರ ಮಹಾಸ್ವಾಮಿಜಿಗಳ ದಿವ್ಯಾಶೀರ್ವಾದ ಪಡೆದು ಸತ್ಕಾರ ಸ್ವೀಕರಿಸುತ್ತಿರುವ ದೃಶ್ಯ.

ಜೊಲ್ಲೆ ಉದ್ಯೋಗ ಸಮೂಹ ರಾಣಿ ಚನ್ನಮ್ಮಾ ವೃತ್ತ, ಯಕ್ಸಂಬಾ ತಾ. ಚಿಕ್ಕೋಡಿ ಜಿ. ಬೆಳಗಾವಿ– 591244 Ph : 9844469288 / 7760983792 E-mail : darpanjus6@gmail.com

ಪ್ರಧಾನ ಸಂಪಾದಕರು :– ಸೌ. ಸುಧಾ ಡಿ. ಪಾಟೀಲ, ಉಪನ್ಯಾಸಕರು, ಕನ್ನಡ ವಿಭಾಗ